ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| **ಅಮಲ**ಜಾರಿ ಸಂಖ್ಯೆ | **06/2023** |
| ಪಿ.ಡಬ್ಲ್ಯೂ | **1** |
| **ದಿನಾಂಕ :-** | **25.03.2026** |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಬಿ.ಆರ್.ಸಿ. ವಕೀಲರಿಂದ

ಡಬ್ಲ್ಯೂ.ಪಿ.ಸಂಖ್ಯೆಃ 777/1981 ರ ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನಾವು ಯಾವುದೇ ಮೇಲ್ಮನವಿಯನ್ನು ಮಾಡಿಲ್ಲ. ಅದೇ ರೀತಿ ಚಿಲಕಮ್ಮ, ಶಾರದಮ್ಮ, ಚಂಪಕಧಾಮ ಹಾಗೂ ನಮ್ಮ ತಂದೆ ಡಿ.ರಾಮದಾಸ್ ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ವಿಚಾರವಾಗಿ ನಾನು ತಿಳಿದುಕೊಂಡಿಲ್ಲ ಹಾಗೂ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಡಬ್ಲ್ಯೂ.ಪಿ.ಸಂಖ್ಯೆಃ 777/1981 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಮುನಿವೆಂಕಟಪ್ಪ ಎಂಬುವವರು ಮಾಲೀಕರು ಹಾಗೂ ಸ್ವಾಧೀನಾದಾರರು ಎಂದು ಆದೇಶವಾಗಿದೆ, ತದನಂತರ ಅವರಿಂದ ಆಸ್ತಿಯ ಸ್ವಾಧೀನವನ್ನು ನಮಗಾಗಲೀ ಅಥವಾ ನಮ್ಮ ಮಾರಾಟಗಾರರಿಗಾಗಲೀ ಬಂದ ಬಗ್ಗೆ ದಾಖಲೆಗಳು ಇವೆಯ ಎಂದರೆ ಸಾಕ್ಷಿ ನಾವು ಚಂಪಕಧಾಮ ರವರಿಂದ ಖರೀದಿ ಮಾಡಿರುತ್ತೇವೆ ಹಾಗೂ ಸ್ವಾ ಧೀನ ಪಡೆದಿರುತ್ತೇವೆ ಎಂದು ನುಡಿದಿರುತ್ತಾರೆ. ಚಂಪಕಧಾಮರವರಿಗೆ ಸ್ವಾಧೀನ ಬಂದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುತ್ತೇವೆ. ಸಾಕ್ಷಿ ನ್ಯಾಯಾಲಯದ ಕಡತವನ್ನು ನೋಡಿ ಸದರಿ ದಾಖಲೆಯನ್ನು ಗುರುತಿಸಲು ತಕ್ಷಣ ಆಗುವುದಿಲ್ಲವೆಂದು ಉತ್ತರಿಸಿರುತ್ತಾರೆ.

ಜಯರಾಮ್ ಎಂಬುವವರ ನನಗೆ ಪರಿಚಯವಿದೆ. ಸದರಿ ಜಯರಾಮ್ ರವರು ಈ ಪ್ರಕರಣದ ಆಸ್ತಿಯನ್ನು ಕಬಳಿಸಬೇಕೆಂದು ಕೆಲವು ಪ್ರಕರಣಗಳನ್ನು ಕಂದಾಯ ಇಲಾಖೆಯಲ್ಲಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಚಿಲಕಮ್ಮ, ಶಾರದಮ್ಮ, ಚಂಪಕಧಾಮ ಹಾಗೂ ನಮ್ಮ ತಂದೆ ಡಿ.ರಾಮದಾಸ್ ರವರು ಈ ಪ್ರಕರಣದ ಆಸ್ತಿಯನ್ನು ಕಬಳಿಸಬೇಕೆಂದು ಅನೇಕ ಪ್ರಕರಣಗಳನ್ನು ಮಾಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

ನಾನು ಕಲ್ಯಾಣ ಮಂಟಪವನ್ನು ನೋಡಿ ಕೊಳ್ಳುತ್ತೇನೆ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ಆ ಕಾರಣ ನನಗೆ ಆಸ್ತಿ ಖರೀದಿ ಮಾಡುವಾಗ ಯಾವ ಯಾವ ದಾಖಲೆಗಳನ್ನು ನೋಡಬೇಕೆಂದು ಹಾಗೂ ಯಾವ ದಾಖಲೆಗಳನ್ನು ಮಾಡಿಸಿಕೊಳ್ಳಬೇಕೆಂದು ತಿಳಿದುಕೊಂಡಿದ್ದೇನೆ. ನಿರ್ದಿಷ್ಟ ಕಾರ್ಯಕ್ಷಮತೆ ದಾವೆಯನ್ನು ಹೂಡಲು ಕ್ರಯದ ಕರಾರು ಇರಬೇಕು ಎಂದರೆ ಸರಿ. ಮುನಿವೆಂಕಟಪ್ಪನವರಿಂದ ಚಂಪಕಧಾಮ ರವರಿಗೆ ಈ ಪ್ರಕರಣದ ಆಸ್ತಿಗೆ ಸಂಬಂಧಿಸಿದಂತೆ ಆಗಿರುವ ಕ್ರಯದ ಕರಾರಿನ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಚಂಪಕಧಾಮ ರವರಿಗೆ ನ್ಯಾಯಾಲಯದ ಆದೇಶದಿಂದ ಆಸ್ತಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಕ್ರಯದ ಕರಾರು ಪತ್ರವನ್ನು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ಒ.ಎಸ್.ಸಂಖ್ಯೆ-901/2016 ರ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದ ಬಗ್ಗೆ ನಾನು 2018 ರಲ್ಲಿ ತಿಳಿದುಕೊಂಡಿರುತ್ತೇನೆ. ಒ.ಎಸ್.ಸಂಖ್ಯೆ-901/2016 ರ ತೀರ್ಪು ಹಾಗೂ ಡಿಕ್ರಿಯಂತೆ ಮುನಿವೆಂಕಟಪ್ಪ ನವರು ಈ ಪ್ರಕರಣದ ಆಸ್ತಿಯ ವಾರಸುದಾರರು ಹಾಗೂ ಸ್ವಾಧೀನದಾರರು ಎಂದರೆ ಸಾಕ್ಷಿ ಸದರಿ ತೀರ್ಪು ಹಾಗೂ ಡಿಕ್ರಿ ಆದ ಮೇಲೆ ನಮಗೆ ಆ ಪ್ರಕರಣದ ವಿಚಾರ ನನಗೆ ತಿಳಿಯಿತು ಎಂದು ನುಡಿದಿರುತ್ತಾರೆ. ಸದರಿ ತೀರ್ಪು ಹಾಗೂ ಡಿಕ್ರಿಯಂತೆ ನಾವು ಈ ಪ್ರಕರಣದ ಆಸ್ತಿಯ ಸ್ವಾಧೀನಕ್ಕೆ ಮುನಿವೆಂಕಟಪ್ಪ ನವರಿಗೆ ತೊಂದರೆ ಕೊಡಬಾರದು ಎಂದರೆ ಸಾಕ್ಷಿ ನಾವೇ ಸದರಿ ಜಮೀನಿನಲ್ಲಿ ಸ್ವಾಧೀನ ಇರುವ ಕಾರಣ ತೊಂದರೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ ಈ ಪ್ರಕರಣದ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ಆದ ಕ್ರಯ ಪತ್ರ ವಜಾ ಆಗಿದೆ ಎಂದರೆ ಸರಿಯಲ್ಲ.

ಪ್ರಮಾಣ ಪತ್ರದಲ್ಲಿರುವ ಮಾಹಿತಿ ತಿಳಿದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ಅದನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ಒ.ಎಸ್.ಸಂಖ್ಯೆ-11/1985 ರ ವಾದ ಪತ್ರ, ಪ್ರತಿವಾದ ಪತ್ರ, ಆದೇಶ ಪುಟಗಳು ಹಾಗೂ ಸದರಿ ದಾವೆಯಲ್ಲಿ ಹಾಜರುಪಡಿಸಿದ ಕ್ರಯದ ಕರಾರು ಪತ್ರ ಹಾಗೂ ಇತರೆ ದಾಖಲೆಗಳು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಅವು ಯಾವುವು ಎಂದು ನೋಡಿ ಹೇಳಬೇಕು ಎಂದು ಉತ್ತರಿಸಿರುತ್ತಾರೆ. ಆ ರೀತಿಯ

ದಾಖಲೆಗಳು ಯಾವುದು ಇಲ್ಲ ಹಾಗೂ ಆ ರೀತಿಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒ.ಎಸ್.ಸಂಖ್ಯೆ-11/1985 ರ ದೃಢೀಕೃತ ವಾದಪತ್ರ, ದೃಢೀಕೃತ ರಾಜೀ ಅರ್ಜಿ, ಡಿಕ್ರಿ ತೋರಿಸಿ ಇದರಲ್ಲಿ ವಾದಿ ಪ್ರತಿವಾದಿಯವರ ಹೆಸರು ಶ್ರೀನಿವಾಸ್ ಮತ್ತು ರಮೇಶ್ ಎಂದರೆ ಇರಬಹುದೇನೂ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಾವೆಯಲ್ಲಿನ ಆಸ್ತಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಆಸ್ತಿ ಬೇರೆ ಬೇರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಒ.ಎಸ್.ಸಂಖ್ಯೆ-11/1985 ಎಂದು ಬೆಂಗಳೂರಿನ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಾದ ದಾವೆಯಲ್ಲಿ ವಾದಿ ಮನೆ ಚಿಕ್ಕಣ್ಣ ಹಾಗೂ ಮುನಿವೀರಪ್ಪ ಹಾಗೂ ಇತರರು ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಸದರಿ ದಾವೆಯ ಆಸ್ತಿಗೂ ಹಾಗೂ ಈ ಪ್ರಕರಣದ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ, ಕೇಳಲಾಗಿ ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಆನೇಕಲ್.